## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು-27.

**ಸಂ/ಬೆಮಸಾಸಂ/ಕೇಕ/ಮುಸಂವ್ಯ/ಆ/ 1381 /17-18 ದಿನಾಂಕ: 17.08.2017**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 90 ನೇ ಬಸ್ ದಿನಾಚರಣೆಯ ಅಂಗವಾಗಿ ದಿನಾಂಕ: 04.07.2017 ರ ಮಂಗಳವಾರದಂದು ಸಮಯ ಮಧ್ಯಾಹ್ನ 3.00 ಗಂಟೆಗೆ ಬನಶಂಕರಿ ಬಸ್ ನಿಲ್ದಾಣದಲ್ಲಿ ನಡೆದ "ಜನಸ್ಪಂದನಾ" ಕಾರ್ಯಕ್ರಮದಲ್ಲಿ ಸ್ವೀಕರಿಸಿದ ಮನವಿಗಳ ಮೇಲೆ ತೆಗೆದುಕೊಂಡ ಕ್ರಮಗಳ ವಿವರಗಳು.

| ಕ್ರ.ಸಂ | ಮನವಿದಾರರ ಹೆಸರು | ಕೋರಿಕೆ | ತೆಗೆದುಕೊಂಡ ಕ್ರಮ |
|---|---|---|---|
| 1 | **ಜಿ.ವಿ.ಹೆಬ್ಬಾರ್ ಹಾಗೂ ಶ್ರೀನಿವಾಸರಾವ್, ಆರ್‌ಬಿಐ ಬಡಾವಣೆ** | ಹುಳಿಮಾವು ಗ್ರಾಮದಿಂದ ಆಚರಣೆಯಾಗುತ್ತಿರುವ ಮೆಟ್ರೋ ಫೀಡರ್ ಮಾರ್ಗಸಂಖ್ಯೆ: ಎಂಎಫ್-21 & 21-ಎ ಗಳನ್ನು ಆರ್‌ಬಿಐ ಬಡಾವಣೆ, ಈಶ್ವರಿ ಬಡಾವಣೆ ಹಾಗೂ ಚುಂಚಘಟ್ಟ, ಯಲಚೇನಹಳ್ಳಿ ಮೆಟ್ರೋ ನಿಲ್ದಾಣ ಮಾರ್ಗವಾಗಿ ಬನಶಂಕರಿಗೆ ಆಚರಣೆಗೊಳಿಸುವಂತೆ ಕೋರಿದರು. | ಕೋರಿರುವ ಮಾರ್ಗದಲ್ಲಿ(ಈಶ್ವರಿ ಬಡಾವಣೆಯ ಹತ್ತಿರ) ಭಾರಿ ವಾಹನಗಳ ಸಂಚಾರಕ್ಕೆ ಯೋಗ್ಯವಾದ ರಸ್ತೆಯಿಲ್ಲದ ಕಾರಣ ಕೋರಿಕೆಯಂತೆ ಮಾರ್ಗಾಚರಣೆಯು ಸೂಕ್ತವಾಗಿರುವುದಿಲ್ಲ.<br>ಹುಳಿಮಾವು ದಿಂದ ಹುಳಿಮಾವುಗೆ ಆಚರಣೆಯಲ್ಲಿದ್ದ ಮಾರ್ಗಸಂಖ್ಯೆ: ಎಂಎಫ್-21 &21-ಎ ಗಳಲ್ಲಿ ನಿರೀಕ್ಷಿತ ಪ್ರಯಾಣಿಕರ ಪ್ರೋತ್ಸಾಹವಿಲ್ಲದ ಕಾರಣ ರದ್ದುಪಡಿಸಿ, ಮಾರ್ಗಸಂಖ್ಯೆ: ಎಂಎಫ್-21 ಅನ್ನು ಸಿ.ಕೆ.ಪಾಳ್ಯದಿಂದ ದೊಡ್ಡಕಮ್ಮನಹಳ್ಳಿ, ಜಂಬೂಸವಾರಿ ದಿಣ್ಣೆ, ಕೋಣನಕುಂಟೆ ಕ್ರಾಸ್ ಮಾರ್ಗವಾಗಿ ಬನಶಂಕರಿಗೆ ಆಚರಣೆಯಾಗುವಂತೆ ಮಾರ್ಗಬದಲಾವಣೆ ಮಾಡಲಾಗಿದೆ. |
| 2 | **ಹೆಚ್.ಜಿ. ಗೋಪಾಲಚಾರಿ:** | ಬಿಇಎಂಎಲ್ 5ನೇ ಹಂತದಿಂದ ಹನುಮಂತನಗರ, ಚಾಮರಾಜಪೇಟೆಗೆ ನೇರ ಸಾರಿಗೆ ಸೌಲಭ್ಯವನ್ನು ಒದಗಿಸುವಂತೆ ಕೋರಿದರು. | ಪ್ರಸ್ತುತ ಬಿಇಎಂಎಲ್ 5ನೇ ಹಂತದಿಂದ ಉತ್ತರಹಳ್ಳಿ, ಎನ್.ಆರ್.ಕಾಲೋನಿ, ಬಸವನಗುಡಿ, ಚಾಮರಾಪೇಟೆ, ಕೆ.ಆರ್.ಮಾರುಕಟ್ಟೆ ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬೆಳಿಗ್ಗೆ, ಮಧ್ಯಾಹ್ನ ಸಾರಿಗೆ ಸೌಲಭ್ಯವಿರುತ್ತದೆ. ಬೆಂಗಳೂರು ನಂತಹ ಮಹಾನಗರದಲ್ಲಿ ಒಂದು ಬಡಾವಣೆಯಿಂದ ಇನ್ನೊಂದು ಬಡಾವಣೆಗೆ ನೇರ ಸೌಲಭ್ಯವನ್ನು ಒದಗಿಸುವುದು ಕಷ್ಟಸಾಧ್ಯ. ಆದ್ದರಿಂದ ನಾಯಂಡನಹಳ್ಳಿ ಜಂಕ್ಷನ್ ನಲ್ಲಿ ಒಂದು ಕಡೆ ಬಸ್ ಬದಲಾಯಿಸುವ ಮೂಲಕ ಬಿಇಎಂಎಲ್ 5ನೇ ಹಂತದಿಂದ ಹನುಮಂತನಗರಕ್ಕೆ ಪ್ರಯಾಣಿಸಬಹುದಾಗಿದೆ ಎಂದು ತಿಳಿಸಲಾಯಿತು. |
| 3 | **ಶ್ರೀ ಎ.ಎಂ.ದೀಕ್ಷಿತ್** | ಯಲಚೇನಹಳ್ಳಿ ಮೆಟ್ರೋ ನಿಲ್ದಾಣದಿಂದ ದೊಡ್ಡ ಕಲ್ಲಸಂದ್ರ, ಗುಬ್ಬಲಾಳ, ಪಾದುಕಾ ಮಂದಿರ್, ಯಾದಲಮ್ ನಗರ, | ಮುಂದಿನ ದಿನಗಳಲ್ಲಿ ಹಂತ-ಹಂತವಾಗಿ ಯಲಚೇನಹಳ್ಳಿ ಮೆಟ್ರೋ ನಿಲ್ದಾಣ, ದೊಡ್ಡ ಕಲ್ಲಸಂದ್ರ, ಕೆಎಸ್‌ಐಟಿ, ಗುಬ್ಬಲಾಳ, ಕರಿಯಣ್ಣನಪಾಳ್ಯ |

| | | | |
|---|---|---|---|
| | | ವಸಂತಪುರ, ಡೆಲ್ಲಿ ಪಬ್ಲಿಕ್ ಸ್ಕೂಲ್, ಯಲಚೇನಹಳ್ಳಿ ಮೆಟ್ರೋ ನಿಲ್ದಾಣಕ್ಕೆ ಫೀಡರ್ ಸೇವೆಗಳನ್ನು ಆರಂಭಿಸಲು ಕೋರಿದರು. | ಮಾರ್ಗವಾಗಿ ಮೆಟ್ರೋ ಫೀಡರ್ ಮಾರ್ಗಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಲಾಯಿತು. |
| 4 | **ಶ್ರೀ ಮಧ್ಯಸ್ಥ, ಬೆಮಸಾಸಂಸ್ಥೆ ಗ್ರಾಹಕ ಸಲಹಾ ಸಮಿತಿ ಸದಸ್ಯರು:** | ಜಂಬೂಸವಾರಿ ದಿಣ್ಣೆ ನಿಲುಗಡೆಯ ಹತ್ತಿರ ಖಾಲಿ ಇರುವ ಜಾಗವನ್ನು ಸಂಸ್ಥೆಯಿಂದ ಖರೀದಿಸಿ, ಸದರಿ ಜಾಗದಲ್ಲಿ ಸಂಚಾರ ನಿಯಂತ್ರಕರ ಕೊಠಡಿ ಹಾಗೂ ಶೌಚಾಲಯವನ್ನು ನಿರ್ಮಿಸುವಂತೆ ಕೋರಿದರು. | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕೊತ್ತನೂರು ಗ್ರಾಮದ ಸರ್ವೆ ನಂ: 46 ರಲ್ಲಿ ಸರ್ಕಾರಿ ಖಾಲಿ ಜಮೀನು ಲಭ್ಯವಿರುವುದಾಗಿ ತಿಳಿದುಬಂದಿದ್ದು, ಸದರಿ ಜಮೀನಿನಲ್ಲಿ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುವ ಸಲುವಾಗಿ ಬಸ್ ನಿಲ್ದಾಣವನ್ನು ನಿರ್ಮಿಸುವಂತೆ ಸ್ಥಳೀಯ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳಿಂದ ಹೆಚ್ಚು ಬೇಡಿಕೆಯಿದ್ದು, ಕೊತ್ತನೂರು ಗ್ರಾಮದ ಸರ್ವೆ ನಂ: 46 ರಲ್ಲಿನ ಸರ್ಕಾರಿ ಖಾಲಿ ಜಮೀನಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಸಾರ್ವಜನಿಕ ಸಾರಿಗೆ ಮೂಲಸೌಕರ್ಯಗಳನ್ನು ಅಭಿವೃದ್ದಿಪಡಿಸುವ ಸಲುವಾಗಿ ಸುಮಾರು 2-00 ಎಕರೆ ಜಮೀನನ್ನು ಹಂಚಿಕೆ ಮಾಡುವಂತೆ ಆಯುಕ್ತರು, ಬಿ.ಡಿ.ಎ ರವರನ್ನು ಪತ್ರ ಬರೆದು ಕೋರಲಾಗಿದೆ. |
| 5 | **ಶ್ರೀ ಮಂಜುನಾಥ್:** | ಮಾರ್ಗಸಂಖ್ಯೆ: 210-ಪಿ ಮತ್ತು 210-ಎನ್ ಗಳನ್ನು ಕೃ.ರಾ.ಮಾರುಕಟ್ಟೆ ಬದಲಾಗಿ ಗೂಡ್‌ಶೆಡ್ ಮಾರ್ಗವಾಗಿ ಆಚರಣೆಗೊಳಿಸುವಂತೆ ಕೋರಿದರು. | ಮಾರ್ಗಸಂಖ್ಯೆ: 210-ಪಿ ಮತ್ತು 210-ಎನ್ ಗಳಲ್ಲಿ ಉತ್ತಮ ಸಾರಿಗೆ ಆದಾಯ ಬರುತ್ತಿರುವುದರಿಂದ ಸದರಿ ಮಾರ್ಗದ ಅನುಸೂಚಿಗಳನ್ನು ಮಾರ್ಗ ಬದಲಾವಣೆ ಮಾಡುವುದು ಸೂಕ್ತವಾಗಿರುವುದಿಲ್ಲ. ಆದಾಗ್ಯೂ ಮುಂದಿನ ದಿನಗಳಲ್ಲಿ ಸದರಿ ಮಾರ್ಗದಲ್ಲಿ ಹೊಸದಾಗಿ ಸಾರಿಗೆ ಸೌಲಭ್ಯವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಲಾಯಿತು. |
| 6 | **ಶ್ರೀ ದೊರೆಸ್ವಾಮಿ** | ಬೈಯನಪಾಳ್ಯ, ಗಾಣಿಗೇರಪಾಳ್ಯ, ಚಿಕ್ಕೆಗೌಡನಹಳ್ಳಿ ಮಾರ್ಗವಾಗಿ ಮೆಟ್ರೋ ಫೀಡರ್ ಪ್ರಾರಂಭಿಸುವಂತೆ ಹಾಗೂ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಸಾರಿಗೆ ಸೌಲಭ್ಯವನ್ನು ಒದಗಿಸುವಂತೆ ಕೋರಿದರು. | ಮುಂದಿನ ದಿನಗಳಲ್ಲಿ ಹಂತ-ಹಂತವಾಗಿ ಬೈಯನಪಾಳ್ಯ, ಗಾಣಿಗೇರಪಾಳ್ಯ, ಚಿಕ್ಕೆಗೌಡನಹಳ್ಳಿ ಮಾರ್ಗವಾಗಿ ಮೆಟ್ರೋ ಫೀಡರ್ ಮಾರ್ಗಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು. ಸದರಿ ಪ್ರದೇಶಗಳಿಂದ ಸಾಮಾನ್ಯ ಬಸ್ಸುಗಳಲ್ಲಿಯೇ ನಿರೀಕ್ಷಿತ ಪ್ರಯಾಣಿಕರ ಪ್ರೋತ್ಸಾಹವಿಲ್ಲದ ಕಾರಣ ವಿಮಾನ ನಿಲ್ದಾಣಕ್ಕೆ ಸಾರಿಗೆ ಸೌಲಭ್ಯ ನೀಡುವುದು ಸೂಕ್ತವಾಗಿರುವುದಿಲ್ಲವೆಂದು ತಿಳಿಸಲಾಯಿತು. |
| 7 | **ಶ್ರೀ ಎನ್. ಗೋಪಾಲಯ್ಯ** | ನಗರದಲ್ಲಿ ವಜ್ರ ಬಸ್ಸುಗಳನ್ನು ಕಡಿಮೆ ಮಾಡಿ ಸಾಮಾನ್ಯ ಬಸ್ಸುಗಳನ್ನು ಹೆಚ್ಚಿಸುವಂತೆ, ಬಸ್ಸುಗಳಲ್ಲಿ ಹಿರಿಯ ನಾಗರಿಕರ ಆಸನಗಳ ಸ್ಟೀಕರ್‌ಗಳನ್ನು ಹಾಕುವಂತೆ, ಬಸ್ಸುಗಳನ್ನು ನಾಮಫಲಕಗಳು ನೀಟಾಗಿ ಕಾಣುವಂತೆ ಹಾಕಬೇಕೆಂದು | ಪ್ರಸ್ತುತ ಸಂಸ್ಥೆಯಲ್ಲಿ 2908 ಹೊಸ ಸಾಮಾನ್ಯ ಮಾದರಿ ಬಸ್ಸುಗಳನ್ನು ಸೇರ್ಪಡೆ ಮಾಡಲು ಯೋಜಿಸಲಾಗಿರುತ್ತದೆ. ಪ್ರಯಾಣಿಕರ ಅನುಕೂಲಕ್ಕಾಗಿ ಮಹಿಳೆಯರಿಗೆ, ಹಿರಿಯ ನಾಗರೀಕರಿಗೆ ಹಾಗೂ ಅಂಗವಿಕಲರಿಗೆ ಪ್ರತ್ಯೇಕ ಆಸನಗಳನ್ನು ಮೀಸರಿಸಲಾಗಿದೆ ಹಾಗೂ ಪ್ರತಿ ವಾಹನಗಳ ಎಫ್.ಸಿ ನವೀಕರಣ ಸಮಯದಲ್ಲಿ ಆಸನಗಳ ಸಮೀಪ |

| | | | |
|---|---|---|---|
| | | ಹಾಗೂ ಸಂಸ್ಥೆಯಲ್ಲಿ ವಾರದ ಪಾಸುಗಳನ್ನು ಪರಿಚಯಿಸುವಂತೆ ಕೋರಿದರು. ಬಸ್ ನಿಲ್ದಾಣಗಳಲ್ಲಿರುವ ಸಾರ್ವಜನಿಕ ಶೌಚಾಲಯಗಳಲ್ಲಿ ಸಂಗ್ರಹಿಸುತ್ತಿರುವ ಫೀಸ್‌ಅನ್ನು ಕಡಿಮೆಗೊಳಿಸುವಂತೆ ಕೋರಿದರು. | ಸ್ಟಿಕ್ಕರ್‌ಗಳನ್ನು ಅಳವಡಿಸಲಾಗುತ್ತಿದೆ.<br>ಎಲ್ಲಾ ಹೊಸ ಬಸ್ಸುಗಳಲ್ಲಿ ಎಲ್.ಇ.ಡಿ. ನಾಮಫಲಕಗಳನ್ನು ಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಈಗಾಗಲೇ ಸಂಸ್ಥೆಯಲ್ಲಿ ದೈನಂದಿನ ಮತ್ತು ಮಾಸಿಕ ಪಾಸುಗಳಿದ್ದು, ವಾರದ ಪಾಸುಗಳನ್ನು ಪರಿಚಯಿಸುವುದು ಕಷ್ಟಸಾಧ್ಯ.<br>ಸಂಸ್ಥೆಯ ಬಸ್ಸು ನಿಲ್ದಾಣಗಳ ಸ್ವಚ್ಛತಾ ನಿರ್ವಹಣೆಯನ್ನು ನಿರ್ವಹಿಸಲು ಟೆಂಡರ್ ಮೂಲಕ ಗುತ್ತಿಗೆಯನ್ನು ನೀಡಲಾಗಿರುತ್ತದೆ. ಸ್ವಚ್ಛತಾ ಗುತ್ತಿಗೆದಾರರಿಗೆ ಕರಾರು ನಿಯಮಗಳಂತೆ ಮೂತ್ರ ವಿಸರ್ಜನೆ ಉಚಿತವಾಗಿ ಹಾಗೂ ಶೌಚಾಲಯ ಬಳಕೆಗೆ ರೂ. 5/- ಗಳನ್ನು ಪಡೆಯಲು ತಿಳಿಸಲಾಗಿದ್ದು, ಶೌಚಾಲಯ ಶುಲ್ಕಗಳನ್ನು ಕಡಿಮೆಗೊಳಿಸುವುದು ಕಷ್ಟಸಾಧ್ಯ. |
| 8 | **ಶ್ರೀ ಶ್ರೀರಾಮ, ಇಸ್ರೋ ಲೇಔಟ್** | ಇಸ್ರೋ ಲೇಔಟ್ ನಿಂದ ಪದ್ಮನಾಭನಗರ, ತ್ಯಾಗರಾಜನಗರ, ಚಾಮರಾಜಪೇಟೆ ಮಾರ್ಗವಾಗಿ ಮೈಸೂರು ರಸ್ತೆ ಬಸ್ ನಿಲ್ದಾಣಕ್ಕೆ ನೇರ ಸಾರಿಗೆ ಸೌಲಭ್ಯವನ್ನು ಒದಗಿಸುವಂತೆ ಕೋರಿದರು. | ಕೋರಿರುವ ಮಾರ್ಗದಲ್ಲಿ ನೇರ ಸಾರಿಗೆ ಸೌಲಭ್ಯವನ್ನು ಒದಗಿಸುವುದು ಕಷ್ಟಸಾಧ್ಯವೆಂದು ಹಾಗೂ ಈಗಾಗಲೇ ಮೆಟ್ರೋ ಫೀಡರ್ ಮಾರ್ಗದಲ್ಲಿ ಇಸ್ರೋ ಲೇಔಟ್ ಮಾರ್ಗವಾಗಿ ಮೈಸೂರು ರಸ್ತೆಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ ಎಂದು ತಿಳಿಸಲಾಯಿತು. |
| 9 | **ಶ್ರೀ ವಿನಯ ಶ್ರೀನಿವಾಸ್, ಬಸ್ ಪ್ರಯಾಣಿಕರ ವೇದಿಕೆ** | ಕಳೆದ ವರ್ಷ ನಡೆಸಿದ ಸಾರಿಗೆ ಅದಾಲತ್ ನಲ್ಲಿ ಕೇಳಿದ ಅಂಶಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡಿರುವುದಲ್ಲ. "ಜನಸ್ಪಂದನಾ" ಕಾರ್ಯಕ್ರಮವನ್ನು 15:00 ಬಂದಲಾಗಿ 16:30 ಗಂಟೆಗೆ ನಿಗಧಿಪಡಿಸಿದರೆ ಹೆಚ್ಚಿನ ಸಂಖ್ಯೆಯ ಸಾರ್ವಜನಿಕ ಪ್ರಯಾಣಿಕರು ಭಾಗವಹಿಸುವ ಸಾಧ್ಯತೆಯಿರುವುದಾಗಿ ತಿಳಿಸಿದರು. ಟಿಕೇಟ್ ದರಗಳನ್ನು ಕಡಿಮೆಮಾಡಿರುವುದಕ್ಕೆ ಅಭಿನಂದಿಸಿದರು. ಮಾಸಿಕ ಪಾಸು ದರಗಳನ್ನು ಕಡಿಮೆಗೊಳಿಸಲು ಕೋರಿದರು. ಸಂಸ್ಥೆಯಲ್ಲಿ ಮಹಿಳೆಯರ ಸುರಕ್ಷತೆ ಬಗ್ಗೆ ಇರುವ ಕಮ್ಮಿಟಿ ಬಗ್ಗೆ ಹೆಚ್ಚು ಪ್ರಚಾರ ನೀಡಲು ಕೋರಿದರು. ಹೊಸ ಮಾರ್ಗಗಳನ್ನು ಪ್ರಾರಂಭಿಸಿದಾಗ ಹೆಚ್ಚು ಪ್ರಚಾರ ನೀಡಲು ಕೋರಿದರು. ಮೆಟ್ರೋ ಫೀಡರ್ ಮಾರ್ಗಗಳಲ್ಲಿ ಆಗುತ್ತಿರುವ ನಷ್ಟವನ್ನು ಬಿಎಂಆರ್‌ಸಿಎಲ್ ವತಿಯಿಂದ ಪಡೆಯುವಂತೆ ಕೋರಿದರು. ಚಾಲನಾ ಸಿಬ್ಬಂದಿಗಳ ಅಹವಾಲುಗಳನ್ನು ಆಲಿಸಲು ಜನಸ್ಪಂದನಾ ಕಾರ್ಯಕ್ರಮಗಳನ್ನು ಆಯೋಜಿಸುವಂತೆ | ಮಾಸಿಕ ಪಾಸು ದರಗಳನ್ನು ಕಡಿಮೆಮಾಡುವುದು ಕಷ್ಟ. ಸಂಸ್ಥೆಯಲ್ಲಿ ಮಹಿಳೆಯರ ಸುರಕ್ಷತೆ ಬಗ್ಗೆ ಇರುವ ಕಮ್ಮಿಟಿ ಬಗ್ಗೆ ಹೆಚ್ಚು ಪ್ರಚಾರ ನೀಡಲು ಕ್ರಮಕೈಗೊಳ್ಳಲಾಗುವುದು. ಹೊಸ ಮಾರ್ಗಗಳನ್ನು ಪ್ರಾರಂಭಿಸಿದಾಗ ಸಂಸ್ಥೆಯ ಫೇಸ್‌ಬುಕ್ ಹಾಗೂ ಟ್ವಿಟರ್‌ನಲ್ಲಿ ಹಾಕಲಾಗುತ್ತಿದೆ ಹಾಗೂ ಪ್ರತಿಕಾ ಪ್ರಕಟಣೆಗಳನ್ನು ನೀಡಲಾಗುತ್ತಿದೆ. ಈಗಾಗಲೇ ಚಾಲನಾ ಸಿಬ್ಬಂದಿಗಳ ಕುಂದು ಕೊರತೆಗಳನ್ನು ಆಲಿಸಲು ಘಟಕ ಮಟ್ಟದಲ್ಲಿ ನೌಕರರ ಕುಂದು-ಕೊರತೆ ಸಭೆಗಳನ್ನು ಏರ್ಪಡಿಸಲಾಗುತ್ತಿದೆ ಎಂದು ತಿಳಿಸಲಾಯಿತು. |

| | | | |
|---|---|---|---|
| | | ಕೋರಿದರು. | |
| 10 | **ಶ್ರೀಮತಿ/ಕುಮಾರಿ. ಮದೀನಾ ತಾಜ್, ಗಾರ್ಮೆಂಟ್ ಸಂಘಟನ** | ಗಾರ್ಮೆಂಟ್ಸ್ ನೌಕರರಿಗೆ ರಿಯಾಯಿತಿ ದರದಲ್ಲಿ ಪಾಸುಗಳನ್ನು ನೀಡಬೇಕೆಂದು, ಬಸ್ಸುಗಳಲ್ಲಿ ಜಾಹೀರಾತು ಫಲಕಗಳನ್ನು ಹಾಕಿರುವುದರಿಂದ, ಬಸ್ಸಿನಲ್ಲಿನ ಪ್ರಯಾಣಿಕರಿಗೆ ರಸ್ತೆಗಳು ಕಾಣುವುದಿಲ್ಲವೆಂದು, ಮಹಿಳಾ ಪ್ರಯಾಣಿಕರಿಗೆ ಮೀಸಲಿರುವ ಆಸನಗಳಲ್ಲಿ ಪುರುಷ ಪ್ರಯಾಣಿಕರು ಕುಳಿತಾಗ ಚಾಲಕ/ನಿರ್ವಾಹಕರು ಆಸನಗಳನ್ನು ಬೀಡಿಸಿಕೊಡಲು ಸಹಕರಿಸುವುದಿಲ್ಲವೆಂದು, ಸಂಸ್ಥೆಯ ಕಾಲ್‌ಸೆಂಟರ್ ನಂಬರ್ ಯಾವಾಗಲೂ ಬ್ಯುಸಿಯಾಗಿರುತ್ತದೆ ಎಂದು ತಿಳಿಸಿದರು. | ಗಾರ್ಮೆಂಟ್ಸ್ ನೌಕರರಿಗೆ ರಿಯಾಯಿತಿ ದರದಲ್ಲಿ ಪಾಸುಗಳನ್ನು ಬಗ್ಗೆ ಕಡತವು ಪರಿಶೀಲನೆಯಲ್ಲಿರುತ್ತದೆ.<br>ಸಂಸ್ಥೆಯ ಬಸ್ಸಿನ ಮೇಲ್ಕಿಟಕಿ ಗಾಜಗಳ ಮೇಲಿನ ಜಾಹೀರಾತು ಪ್ರದರ್ಶನದಿಂದ ಆಗುವ ತೊಂದರೆಗಳ ಬಗ್ಗೆ ದೂರಗಳನ್ನು ಸ್ವೀಕರಿಸಿದ ಹಿನ್ನಲೆಯಲ್ಲಿ, ಪ್ರಸ್ತ ಪರವಾನಗಿದಾರರ ಅವಧಿ(ಸೆಪ್ಟೆಂಬರ್–2018) ಮುಗಿದ ನಂತರ ಸಂಸ್ಥೆಯ ಸಾಮಾನ್ಯ ಬಸ್ಸುಗಳ ಮೇಲ್ಕಿಟಕಿ ಗಾಜುಗಳ ಮೇಲೆ ಜಾಹೀರಾತು ಪ್ರದರ್ಶಿಸುವ ಅನುಮತಿಯನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿರುತ್ತದೆ.<br>ಮಹಿಳೆಯರಿಗೆ 14 ಹಾಗೂ ಹಿರಿಯ ನಾಗರಿಕರಿಗೆ 6 ಆಸನಗಳನ್ನು ಮೀಸರಿಸಲಾಗಿದೆ. ಮಹಿಳಾ ಆಸನಗಳಲ್ಲಿ ಕುಳಿತು ಪ್ರಯಾಣಿಸುವ ಪುರುಷ ಪ್ರಯಾಣಿಕರಿಗೆ(ಮಹಿಳಾ ಪ್ರಯಾಣಿಕರು ನಿಂತಿದ್ದ ಪಕ್ಷದಲ್ಲಿ ಮಾತ್ರ) ದಂಡವನ್ನು ವಿಧಿಸಲಾಗುತ್ತಿದೆ. |
| 11 | **ಶ್ರೀ. ಹೂಗಾರ** | ಬನಶಂಕರಿ ಬಸ್ ಡಿಪೋ ಸ್ಮಶಾನದಲ್ಲಿ ಇರುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿರುವುದರಿಂದ ಬೇರೆ ಕಡೆಗೆ ಸ್ಥಳಾಂತರಿಸಲು ಕೋರಿದರು. | ಈ ಸಂಬಂಧ ಪರಿಶೀಲಿಸಲಾಗುವುದು ಎಂದು ತಿಳಿಸಲಾಯಿತು. |
| 12 | **ಶ್ರೀಮತಿ. ಪರಿಲತಾ:** | ಬಸ್ಸುಗಳ ಕಿಟಕಿ ಗಾಜುಗಳ ಮೇಲೆ ಜಾಹೀರಾತು ಫಲಕಗಳನ್ನು ಹಾಕಿರುವುದರಿಂದ ಹಾಗೂ ಬಸ್ಸುಗಳ ಮೇಲ್ಚಾವಣಿ ಸೋರುತ್ತಿರುವುದರಿಂದ ಪ್ರಯಾಣಿಕರಿಗೆ ತೊಂದರೆ ಯಾಗುತ್ತಿರುವುದಾಗಿ, ಹಿರಿಯ ನಾಗರಿಕರ ಹಾಗೂ ಮಹಿಳಾ ಪ್ರಯಾಣಿಕರ ಆಸನಗಳಲ್ಲಿ ಪುರುಷ ಪ್ರಯಾಣಿಕರು ಕುಳಿತಾಗ, ಚಾಲಕ/ನಿರ್ವಾಹಕರು ಆಸನಗಳನ್ನು ಬೀಡಿಸಿಕೊಡಲು ಸಹಕರಿಸುವುದಿಲ್ಲ ಹಾಗೂ ಚಾಲನಾ ಸಿಬ್ಬಂದಿಗಳು ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸುವುದಿಲ್ಲವೆಂದು ತಿಳಿಸಿದರು. | ಸಂಸ್ಥೆಯ ಬಸ್ಸಿನ ಮೇಲ್ಕಿಟಕಿ ಗಾಜಗಳ ಮೇಲಿನ ಜಾಹೀರಾತು ಪ್ರದರ್ಶನದಿಂದ ಆಗುವ ತೊಂದರೆಗಳ ಬಗ್ಗೆ ದೂರಗಳನ್ನು ಸ್ವೀಕರಿಸಿದ ಹಿನ್ನಲೆಯಲ್ಲಿ, ಪ್ರಸ್ತ ಪರವಾನಗಿದಾರರ ಅವಧಿ(ಸೆಪ್ಟೆಂಬರ್–2018) ಮುಗಿದ ನಂತರ ಸಂಸ್ಥೆಯ ಸಾಮಾನ್ಯ ಬಸ್ಸುಗಳ ಮೇಲ್ಕಿಟಕಿ ಗಾಜುಗಳ ಮೇಲೆ ಜಾಹೀರಾತು ಪ್ರದರ್ಶಿಸುವ ಅನುಮತಿಯನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿರುತ್ತದೆ.<br>ಸಂಸ್ಥೆಯ ಕೇಂದ್ರೀಯ ಕಾರ್ಯಾಗಾರದಲ್ಲಿ ಮೇಲ್ಚಾವಣಿ ಸೋರುವಿಕೆ ಪರೀಕ್ಷಣಾ ಸ್ಥಾವರವನ್ನು ಅಳವಡಿಸಿದ್ದು, ಬಸ್ಸುಗಳ ವಾರ್ಷಿಕ ನವೀಕರಣ, ಅಪಘಾತ ದುರಸ್ಥಿ, ಬಾರಿ ಕವಚ ದುರಸ್ಥಿ ಹಾಗೂ ಹೊಸ ಬಸ್ಸುಗಳ ಕವಚ ನಿರ್ಮಾಣದ ವೇಳೆ ಪ್ರತಿ ಬಸ್ಸಿನ ಛಾವಣಿಯಲ್ಲಿ ನೀರು ಸೋರುವಿಕೆಯನ್ನು ಮೇಲ್ಚಾವಣಿ ಸೋರುವಿಕೆ ಪರೀಕ್ಷಣಾ ಸ್ಥಾವರದಲ್ಲಿ ಪರೀಕ್ಷಿಸಿ ಸೋರುವಿಕೆ ಇಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳಲಾಗುವುದು.<br>ಸಂಸ್ಥೆಯಲ್ಲಿ ಚಾಲನಾ ಸಿಬ್ಬಂದಿಗಳಿಗೆ ಪ್ರಯಾಣಿಕರೊಂದಿಗೆ ಸೌಜನ್ಯದಿಂದ |

| | | | |
|---|---|---|---|
| | | | ವರ್ತಿಸುವಂತೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. |
| 13 | **ಶ್ರೀ ಸುಧಾಕರ್** | ಕೆಂಗೇರಿಯಿಂದ ಎನ್.ಆರ್.ಕಾಲೋನಿಗೆ ನೇರ ಸಾರಿಗೆ ಸೌಲಭ್ಯವನ್ನು ಒದಗಿಸುವಂತೆ ಕೋರಿದರು. | ಬೆಂಗಳೂರು ನಂತಹ ಮಹಾನಗರದಲ್ಲಿ ಒಂದು ಬಡಾವಣೆಯಿಂದ ಮತ್ತೊಂದು ಬಡಾವಣೆಗೆ ನೇರ ಸಾರಿಗೆ ಸೌಲಭ್ಯವನ್ನು ಒದಗಿಸುವುದು ಕಷ್ಟಸಾಧ್ಯ. ದೇವೆಗೌಡ ಪೆಟ್ರೋಲ್ ಬಂಕ್ ಅಥವಾ ಉತ್ತರಹಳ್ಳಿಯಲ್ಲಿ ಒಂದು ಕಡೆ ಬಸ್ ಬದಲಾಯಿಸುವ ಮೂಲಕ ಎನ್.ಆರ್.ಕಾಲೋನಿಗೆ ಪ್ರಯಾಣಿಸಿ, ಸಂಸ್ಥೆಯೊಡನೆ ಸಹಕರಿಸುವಂತೆ ಕೋರಲಾಯಿತು. |
| 14 | **ಶ್ರೀ ಯಶ್ವಂತ್** | ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ರಿಯಾಯಿತಿ ಪಾಸುಗಳನ್ನು ಬೇಗನೆ ವಿತರಿಸುವಂತೆ ಕೋರಿದರು. | ದಿನಾಂಕ: 05.07.2017 ರಿಂದ ವಿತರಿಸುವುದಾಗಿ ತಿಳಿಸಲಾಯಿತು ಹಾಗೂ ಈಗಾಗಲೇ ವಿದ್ಯಾರ್ಥಿ ರಿಯಾಯಿತಿ ಪಾಸುಗಳನ್ನು ವಿತರಿಸಲಾಗುತ್ತಿದೆ. |
| 15 | **ಶ್ರೀ ರಾಜಾರಾಮ, ನಾರಾಯಣನಗರ** | ನಾರಾಯಣನಗರ 1ನೇ ಬ್ಲಾಕ್ ದಿಂದ ಜಯನಗರಕ್ಕೆ ಮೆಟ್ರೋ ಫೀಡರ್ ಮಾರ್ಗಗಳನ್ನು ನೀಡುವಂತೆ ಕೋರಿದರು. | ಈಗಾಗಲೇ ನಾರಾಯಣನಗರದಿಂದ ಜಯನಗರಕ್ಕೆ ಮೆಟ್ರೋ ಫೀಡರ್ ಮಾರ್ಗಸಂಖ್ಯೆ: ಎಂಎಫ್–22 ರಲ್ಲಿ ಸಾರಿಗೆ ಸೌಲಭ್ಯವನ್ನು ಪ್ರಾರಂಭಿಸಿರುವುದಾಗಿ ತಿಳಿಸಲಾಯಿತು. |
| 16 | **ಶ್ರೀ ಸಿದ್ಧಾರ್ಥ್** | ಮಾರ್ಗಸಂಖ್ಯೆ: 410–ಎಫ್, ಎಫ್ಎ, 501–ಎ, ಸಿ, ಇ, 252–ಇ ಗಳಲ್ಲಿ ಮಿಡಿ ವಾಹನಗಳನ್ನು ಆಚರಣೆಗೊಳಿಸುವ ಬದಲು ಜನಸಂದಣಿ ಕಡಿಮೆ ಇರುವ ಮಾರ್ಗಗಳಲ್ಲಿ ನಿಯೋಜಿಸುವಂತೆ ಹಾಗೂ 215–ಸಿಎ ಮತ್ತು 15–ಜಿ/15ಎಫ್ ಗಳನ್ನು ಬನಶಂಕರಿ ಮಾರ್ಗವಾಗಿ ಆಚರಣೆಗೊಳಿಸುವಂತೆ ಕೋರಿದರು. ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿ ಬೆಮಸಾಸಂಸ್ಥೆಯಿಂದ ಆಚರಣೆಗೊಳಿಸುತ್ತಿರುವ ಮೆಟ್ರೋ ಫೀಡರ್ ಮಾರ್ಗಗಳ ವೇಳಾಪಟ್ಟಿ, ಮಾರ್ಗದ ವಿವರ ಮುಂತಾದ ಮಾಹಿತಿಗಳನ್ನು ಹಾಕುವಂತೆ ಕೋರಿದರು. ಮಾರ್ಗಗಳ ಮಾಹಿತಿಯನ್ನು ನೀಡಲು ಸಂಚಾರ ನಿಯಂತ್ರಕರನ್ನು ನಿಯೋಜಿಸಲು ಕೋರಿದರು. | ಮಾರ್ಗಸಂಖ್ಯೆ: 215–ಸಿಎ ಮತ್ತು 15–ಜಿ/15ಎಫ್ ಗಳನ್ನು ಮಾರ್ಗ ಬದಲಾವಣೆ ಮಾಡಿದರೆ ಹಾಲಿ ಸೌಲಭ್ಯ ಪಡೆಯುತ್ತಿರುವ ಪ್ರಯಾಣಿಕರಿಗೆ ತೊಂದರೆಯಾಗುವುದರಿಂದ ಮಾರ್ಗ ಬದಲಾವಣೆ ಮಾಡುವುದು ಸೂಕ್ತವಾಗಿರುವುದಿಲ್ಲ. ಮೆಟ್ರೋ ನಿಲ್ದಾಣಗಳಲ್ಲಿ ಬೆಮಸಾಸಂಸ್ಥೆಯಿಂದ ಆಚರಣೆಗೊಳಿಸುತ್ತಿರುವ ಮೆಟ್ರೋ ಫೀಡರ್ ಮಾರ್ಗಗಳ ವೇಳಾಪಟ್ಟಿ, ಮಾರ್ಗದ ವಿವರ ಮುಂತಾದ ಮಾಹಿತಿಗಳನ್ನು ಹಾಕಲು ಅಗತ್ಯ ಸ್ಥಳಾವಕಾಶ/ಸಹಕಾರ ನೀಡುವಂತೆ ಬಿಎಂಆರ್‌ಸಿಎಲ್ ಅಧಿಕಾರಿಗಳನ್ನು ಕೋರಲಾಗಿದೆ ಎಂದು ತಿಳಿಸಲಾಯಿತು. |
| 17 | **ಶ್ರೀ ಅಶೋಕ್ ಚಕ್ರವರ್ತಿ** | ಚಿಲ್ಲರೆ ಸಮಸ್ಯೆ ಇರುವುದಾಗಿ, ಬನಶಂಕರಿ ಬಸ್ ನಿಲ್ದಾಣದಲ್ಲಿ ಸಮಸ್ಯೆಯಿರುವುದಾಗಿ, ಬಸ್ಸುಗಳು ವೇಳಾಪಟ್ಟಿಯನ್ನು ಪಾಲಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ, ಮಾರ್ಗಸಂಖ್ಯೆ: 201 ರಲ್ಲಿರುವ ಕೆಲವು ಬಸ್ಸುಗಳನ್ನು ಕದಿರೇನಹಳ್ಳಿ ಕ್ರಾಸ್ ಮಾರ್ಗವಾಗಿ ಆಚರಣೆಗೊಳಿಸುವಂತೆ ಕೋರಿರುತ್ತಾರೆ. | ಚಿಲ್ಲರೆ ಸಮಸ್ಯೆಯನ್ನು ಪರಿಹರಿಸಲು ಸ್ಮಾರ್ಟ್‌ಕಾರ್ಡ್‌ಗಳನ್ನು ಜಾರಿಗೆ ತರುತ್ತಿರುವುದಾಗಿ, ವೇಳಾಪಟ್ಟಿಯನ್ನು ಪಾಲಿಸಲು ಬಸ್ಸುಗಳಲ್ಲಿ ವಿಟಿಎಸ್ ಅಳವಡಿಸಿರುವುದಾಗಿ ತಿಳಿಸಲಾಯಿತು. ಪ್ರಸ್ತುತ ಬನಶಂಕರಿ ಕಡೆಯಿಂದ ಕದಿರೇನಹಳ್ಳಿ ಕ್ರಾಸ್, ರಿಂಗ್ ರಸ್ತೆ ಮಾರ್ಗವಾಗಿ ಸಾಕಷ್ಟು ಸಾರಿಗೆ ಸೌಲಭ್ಯವಿರುವುದರಿಂದ ಮಾರ್ಗಸಂಖ್ಯೆ: 201 ರಲ್ಲಿನ ಬಸ್ಸುಗಳನ್ನು ಬದಲಾಯಿಸುವುದು ಸೂಕ್ತವಾಗಿರುವುದಿಲ್ಲ ಎಂದು ತಿಳಿಸಲಾಯಿತು. |

| | | | |
|---|---|---|---|
| 18 | ಶ್ರೀ ಅನುರುಧ್ | ಸಂಸ್ಥೆಯಲ್ಲಿ ಅಳವಡಿಸಿಕೊಂಡಿರುವ ಪ್ರಯಾಣ ದರ ಮತ್ತು ಪ್ರಯಾಣ ದರಗಳ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ನೀಡುವಂತೆ, ಸಂಸ್ಥೆಯ ಸ್ಮಾರ್ಟ್ ಕಾರ್ಡ್‌ಅನ್ನು ಮೆಟ್ರೋ ರೈಲುಗಳಲ್ಲಿಯೂ ಸಹ ಉಪಯೋಗಿಸಲು ಅನುಕೂಲ ಮಾಡುವಂತೆ, ಹೆಚ್ಚಿನ ಸಂಖ್ಯೆಯ ಗಾರ್ಮೆಂಟ್ಸ್ ಇರುವ ಕಡೆ ಅಟಲ್ ಸಾರಿಗೆ ಬಸ್ಸುಗಳನ್ನು ಆಚರಣೆಗೊಳಿಸುವಂತೆ ಕೋರಿದರು. | ಸಂಸ್ಥೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಪ್ರಯಾಣ ದರ ಮತ್ತು ದರದ ಹಂತಗಳನ್ನು ನಿಗಧಿಪಡಿಸಲಾಗಿದೆ. ಸಂಸ್ಥೆಯು ವಿತರಿಸುತ್ತಿರುವ ಸ್ಮಾರ್ಟ್ ಕಾರ್ಡ್ ವಿವಿಧೋದ್ದೇಶಗಳಿಂದ ಕೂಡಿರುತ್ತದೆ ಹಾಗೂ ಇದನ್ನು ವಿವಿಧ ಕಡೆಗೆ ಉಪಯೋಗಿಸಬಹುದಾಗಿರುತ್ತದೆ. ಸಂಸ್ಥೆಯು ಪ್ರಸ್ತುತ 11 ಮಾರ್ಗಗಳಲ್ಲಿ 20 ಅಟಲ್ ಸಾರಿಗೆ ಬಸ್ಸುಗಳನ್ನು ಆಚರಣೆಗೊಳಿಸಲಾಗುತ್ತಿದೆ ಎಂದು ತಿಳಿಸಲಾಯಿತು. |
| 19 | ಶ್ರೀ ಮಮತಾ ಬಸ್ ಪ್ರಯಾಣಿಕರ ವೇದಿಕೆ | ಮಹಿಳಾ ಸುರಕ್ಷತೆಯ ಬಗ್ಗೆ ಸಭೆ ಕರೆದಿರುವುದಿಲ್ಲ. ಎಲ್ಲಾ ಬಸ್ಸುಗಳಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ಜಾಗೃತಿ ಮೂಡಿಸುವ ಸ್ಟೀಕರ್‌ಗಳು ಇರುವುದಿಲ್ಲ. | ಸಂಸ್ಥೆಯಲ್ಲಿ ಮಾನ್ಯ ನಿರ್ದೇಶಕರು(ಭ&ಜಾ) ರವರ ಅಧ್ಯಕ್ಷತೆಯಲ್ಲಿ ಸಂಸ್ಥೆಯ ಹಿರಿಯ/ಕಿರಿಯ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಂತೆ ಮಹಿಳಾ ಪ್ರಯಾಣಿಕರ ಸುರಕ್ಷತೆಯ ಸಮಿತಿಯನ್ನು ರಚಿಸಿದ್ದು, ಸೆಪ್ಟೆಂಬರ್–2016 ರಲ್ಲಿ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಮುಂದೆ ಸಭೆಯ ದಿನಾಂಕವನ್ನು ಮಾನ್ಯ ನಿರ್ದೇಶಕರಲ್ಲಿ ಚರ್ಚಿಸಿ ಸಭೆಯನ್ನು ನಿಗಧಿಗೊಳಿಸಲಾಗುವುದು.<br>2014 ನೇ ಸಾಲಿನಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ಜಾಗೃತಿಯನ್ನು ಮೂಡಿಸುವ ಒಟ್ಟು 14,000 ಸ್ಟಿಕ್ಕರ್‌ಗಳನ್ನು ಮುದ್ರಿಸಿ ಎಲ್ಲಾ ಬಸ್ಸುಗಳಲ್ಲಿಯೂ ಸಹ ಅಂಟಿಸಲಾಗಿರುತ್ತದೆ. |
| 20 | ಶ್ರೀ ಶ.ಶಿ.ಅಂಗಡಿ | ಕನಕಪುರ ರಸ್ತೆಯಲ್ಲಿ ಆಚರಣೆಯಲ್ಲಿರುವ ಬಸ್ಸುಗಳು ಹಳೆ ಬಸ್ಸುಗಳಾಗಿದ್ದು, ಮಳೆ ಬಂದಾಗ ಮೇಲ್ಛಾವಣಿ ಸೋರುತ್ತವೆ. | ಹೊಸ ಬಸ್ಸುಗಳು ಸೇರ್ಪಡೆ ನಂತರ ಹಳೆಯ ಬಸ್ಸುಗಳನ್ನು ಹಂತ–ಹಂತವಾಗಿ ಬದಲಾಯಿಸಲಾಗುತ್ತದೆ ಎಂದು ತಿಳಿಸಲಾಯಿತು. |
| 21 | ಶ್ರೀ ಎಸ್.ಜಯರಾಜು | ಜೆ.ಪಿ.ನಗರ 7ನೇ ಹಂತದಿಂದ ಕೊತ್ತನೂರು ದಿಣ್ಣೆ, ಯಲಚೇನಹಳ್ಳಿ ಮೆಟ್ರೋ ನಿಲ್ದಾಣ, ಬನಶಂಕರಿ, ಗಾಂಧಿ ಬಜಾರ್, ಮೈಸೂರು ರಸ್ತೆ ಬಸ್ ನಿಲ್ದಾಣ ಮಾರ್ಗವಾಗಿ ವಿಜಯನಗರಕ್ಕೆ ನೇರ ಸಾರಿಗೆ ಸೌಲಭ್ಯವನ್ನು ನೀಡುವಂತೆ ಕೋರಿದರು. | ಪ್ರಸ್ತುತ ಜೆ.ಪಿ.ನಗರ 7ನೇ ಹಂತ ಮಾರ್ಗವಾಗಿ ಜಯನಗರ ಬಸ್ ನಿಲ್ದಾಣಕ್ಕೆ ಮಾರ್ಗಸಂಖ್ಯೆ: 215–ಸಿ, 215–ಸಿಎ, 215–ಹೆಚ್, ಕೆ–6 ಗಳಲ್ಲಿ ಹಾಗೂ ಜಯನಗರ ಬಸ್ ನಿಲ್ದಾಣ, ಗಾಂಧಿ ಬಜಾರ್, ಚಾಮರಾಜಪೇಟೆ, ಮೈಸೂರು ರಸ್ತೆ ಬಸ್ ನಿಲ್ದಾಣ ಮಾರ್ಗವಾಗಿ ವಿಜಯನಗರಕ್ಕೆ ಮಾರ್ಗಸಂಖ್ಯೆ: 60 ರ ಶ್ರೇಣಿ ಹಾಗೂ ಕೆ–3 ರಲ್ಲಿ ಸಾಕಷ್ಟು ಸಾರಿಗೆ ಸೌಲಭ್ಯವಿರುತ್ತದೆ. ಆದ್ದರಿಂದ ಜಯನಗರ ಬಸ್ ನಿಲ್ದಾಣದಲ್ಲಿ ಒಂದು ಕಡೆ ಬಸ್ ಬದಲಾಯಿಸುವ ಮೂಲಕ ಕೋರಿರುವ ಸ್ಥಳಗಳಿಗೆ ಪ್ರಯಾಣಿಸಬಹುದಾಗಿರುತ್ತದೆ ಎಂದು ತಿಳಿಸಲಾಯಿತು. |
| 22 | ಶ್ರೀ ಎಲ್.ಜನಾರ್ಧನ್. | ಬಸ್ಸುಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರು ಮೊಬೈಲ್ ಬದಲಾಗಿ ಇಯರ್‌ಫೋನ್/ಹೆಡ್‌ಫೋನ್‌ಗಳನ್ನು ಕಡ್ಡಾಯವಾಗಿ ಬಳಸುವಂತೆ ಸೂಚನೆಯನ್ನು ನೀಡಬೇಕು. | ಬಸ್ಸುಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರು ಮೊಬೈಲ್ ಬದಲಾಗಿ ಇಯರ್‌ಫೋನ್/ಹೆಡ್‌ಫೋನ್‌ಗಳನ್ನು ಕಡ್ಡಾಯವಾಗಿ ಬಳಸುವಂತೆ ಸೂಚನೆಯನ್ನು ನೀಡುವುದು ಕಷ್ಟಸಾಧ್ಯ ಎಂದು ತಿಳಿಸಲಾಯಿತು.<br>ನಾಮಫಲಕಗಳಲ್ಲಿನ ಕನ್ನಡ ಶಬ್ದಗಳ ಕಾಗುಣಿತ ಮತ್ತು |

| | | | |
|---|---|---|---|
| | | ನಾಮಫಲಕಗಳಲ್ಲಿರುವ ಕನ್ನಡ ಶಬ್ದಗಳ ಕಾಗುಣಿತ ಮತ್ತು ಇಂಗ್ಲೀಷ್ ಸ್ಪೆಲ್ಲಿಂಗ್‌ಗಳನ್ನು ಸರಿಪಡಿಸುವಂತೆ ಕೋರಿದರು. | ಇಂಗ್ಲೀಷ್ ಸ್ಪೆಲ್ಲಿಂಗ್ ಗಳಲ್ಲಿ ತಪ್ಪುಗಳು ಕಂಡುಬಂದಲ್ಲಿ ಪರಿಶೀಲಿಸಿ, ಸರಿಪಡಿಸುವಂತೆ ಹಾಗೂ ಈ ದೋಷವು ಮರುಕಳಿಸದಂತೆ ಎಚ್ಚರವಹಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. |
| 23 | **ಶ್ರೀ ಕೆ.ಆರ್. ಮಲ್ಲೇಶ್:–** | ಹೊಸಕೆರೆಹಳ್ಳಿ ಅರಳಿಮರ ಬಸ್ ನಿಲುಗಡೆಗೆ ಬೆಳಗ್ಗೆ 06.00 ಗಂಟೆಗೆ ಮತ್ತು ಸಂಜೆ 08.00 ಗಂಟೆಗೆ ಬಸ್ಸುಗಳು ಬರುತ್ತಿಲ್ಲವೆಂದು ತಿಳಿಸಿದರು. | ವ್ಯವಸ್ಥಿತ ಆಚರಣೆಗೆ ಕ್ರಮಕೈಗೊಳ್ಳಲಾಗಿದೆ. |

–ಸಹಿ–
ಮುಖ್ಯ ಸಂಚಾರ ವ್ಯವಸ್ಥಾಪಕರು(ಆ)
ಬೆಮಸಾಸಂಸ್ಥೆ.

ಪ್ರತಿಯನ್ನು:

1) ಆಪ್ತ ಕಾರ್ಯದರ್ಶಿ, ಮಾನ್ಯ ಅಧ್ಯಕ್ಷರು, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
2) ಆಪ್ತ ಕಾರ್ಯದರ್ಶಿ, ಮಾನ್ಯ ಉಪಾಧ್ಯಕ್ಷರು, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
3) ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
4) ಆಪ್ತ ಕಾರ್ಯದರ್ಶಿ, ನಿರ್ದೇಶಕರು, (ಮಾಹಿತಿ ತಂತ್ರಜ್ಞಾನ) ರವರ ಕಛೇರಿ, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
5) ಆಪ್ತ ಕಾರ್ಯದರ್ಶಿ, ನಿರ್ದೇಶಕರು, (ಭ.ಜಾ ಮತ್ತು ಪರಿಸರ) ರವರ ಕಛೇರಿ, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
6) ಮುಖ್ಯ ತಾಂತ್ರಿಕ ಅಭಿಯಂತರರು(ನಿ/ಉ), ಕೇಂದ್ರ ಕಛೇರಿ, ಬೆಂಮಸಾಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
7) ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
8) ವಿಭಾಗ ನಿಯಂತ್ರಣಾಧಿಕಾರಿಗಳು, ಕೇಂದ್ರೀಯ, ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ವಿಭಾಗ, ಬೆಂ.ಮ.ಸಾ.ಸಂಸ್ಥೆ, ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.
9) **ಮುಖ್ಯ ಗಣಕ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ, ರವರಿಗೆ ಮಾಹಿತಿಗಾಗಿ ಹಾಗೂ ಸದರಿ Action-taken report ಅನ್ನು ಸಂಸ್ಥೆಯ ವೆಬ್–ಸೈಟ್ ನಲ್ಲಿ ಪ್ರಕಟಿಸಲು ಕೋರಲಾಗಿದೆ.**

**ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ),**
**ಬೆ.ಮ.ಸಾ.ಸಂಸ್ಥೆ**